**2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು**

**S.C. No.** 270/2019

**ಸಾಕ್ಷಿಯನ್ನು ದಿನಾಂಕ 2.2.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ನೌಷಾದ್ ಪಾಷ | ಪಿ.ಡಬ್ಲ್ಯೂ- 19 |
| ತಂದೆಯ/ಗಂಡನ ಹೆಸರು | : | ಮಹಮ್ಮದ್ ಪಾಷ | ಸಿ.ಡಬ್ಲ್ಯೂ- 16 |
| ವಯಸ್ಸು | : | 26 | |
| ಉದ್ಯೋಗ | : | ಟಾಂಗವಾಲ | |
| ವಾಸ ಸ್ಥಳ | : | ಉದಯಗಿರಿ, ಮೈಸೂರು | |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನ್ಯಾಯಾಲಯದ ಮುಂದಿರುವ ಆರೋಪಿ ನನ್ನ ಅಣ್ಣನಿರುತ್ತಾನೆ. ಮೃತ ರೇಷ್ಮಾಬಾನು ನನ್ನ ಅತ್ತಿಗೆ ಅಂದರೆ ಆರೋಪಿಯ ಹೆಂಡತಿ ಇರುತ್ತಾರೆ. ಆರೋಪಿತನಿಗೆ 3 ಜನ ಮಕ್ಕಳು. ಅವರ ಹೆಸರು ಸರಿಯಾಗಿ ಗೊತ್ತಿಲ್ಲ. ದಿನಾಂಕ 26.7.2019 ರಂದು ನನ್ನ ಅತ್ತಿಗೆ ರೇಷ್ಮಾಬಾನು ಮರಣ ಹೊಂದಿರುತ್ತಾರೆ. ಅವರು ಮರಣ ಹೊಂದುವ ಕಾಲಕ್ಕೆ ಆರೋಪಿ, ಹೆಂಡತಿ ಮತ್ತು ಅವರ ಮಕ್ಕಳೊಂದಿಗೆ ಗಾಯತ್ರಿಪುರಂನ ಎಂ.ಸಿ.ಸಿ ಕಾಲೋನಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಿದ್ದರು. ಆರೋಪಿತ ಪೈಪ್ ಅಂಗಡಿಯಲ್ಲಿ ಕೆಲಸ ಮಾಡುತ್ತಿದ್ದ. ನನ್ನ ಅತ್ತಿಗೆ ರೇಷ್ಮಾಬಾನು ರವರನ್ನು ಯಾರು ಯಾವ ಕಾರಣಕ್ಕೆ ಕೊಲೆ ಮಾಡಿರುತ್ತಾರೆ ಎಂದು ಗೊತ್ತಿಲ್ಲ. ನನ್ನ ಅತ್ತಿಗೆ ಮರಣ ಹೊಂದಿದಾಗ ಪೋಲಿಸರು ನನ್ನನ್ನು ಕರೆದಿದ್ದರು. ಆ ಕಾಲಕ್ಕೆ ನಾನು

ಪೋಲಿಸರು ಮೃತ ವ್ಯಕ್ತಿ ನನ್ನ ಅತ್ತಿಗೆ ಮಾತ್ರ ಎಂದು ಹೇಳಿದ್ದೆ, ಆದರೆ ಯಾರು ಕೊಲೆ ಮಾಡಿದ್ದಾರೆ ಎಂದು ಹೇಳಿರುವುದಿಲ್ಲ. ಅವರನ್ನು ಯಾರು ಕೊಲೆ ಮಾಡಿದ್ದಾರೆ ಎಂದು ಈಗಲೂ ಗೊತ್ತಿಲ್ಲ. ನಾನು ಯಾವತ್ತೂ ಆರೋಪಿತರ ಮನೆಗೆ ಹೋಗುತ್ತಿರಲಿಲ್ಲ. ನನ್ನ ಅತ್ತಿಗೆ ಮರಣ ಹೊಂದಿದ ಹಿಂದಿನ ದಿನ ಗಲಾಟೆಯಾಗಿದ್ದ ಬಗ್ಗೆ ಗೊತ್ತಿಲ್ಲ. ಆರೋಪಿತ ತನ್ನ ಹೆಂಡತಿ ಬಳಿ ನನ್ನ ಬಗ್ಗೆ ಏನು ಕೇಳುತ್ತಿದ್ದ ಎಂದು ಗೊತ್ತಿಲ್ಲ. ಸಮ್ಮು ಎಂಬುವವರು ನನ್ನ ಇನ್ನೊಬ್ಬ ಅಣ್ಣ ಇರುತ್ತಾರೆ. ನನಗೂ ಮೃತ ರೇಷ್ಮಾಬಾನು ರವರಿಗೂ ಯಾವ ಸಂಬಂಧ ಇರಲಿಲ್ಲ. ನಾನು ಪೋಲಿಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಆರೋಪಿ ವಿರುದ್ಧ ಯಾರು ದೂರು ನೀಡಿರುತ್ತಾರೆ ಎಂದು ಗೊತ್ತಿಲ್ಲ.

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ, ಪರಿಶೀಲಿಸಿ ಸಕಾರಣಗಳಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ**

ನಾನು ಆರೋಪಿತನ ಮನೆಗೆ ಆಗಾಗ ಹೋಗಿ ಆತನ ಮಕ್ಕಳನ್ನು ಮಾತನಾಡಿಸಿಕೊಂಡು ಬರುತ್ತಿದ್ದ ಕಾರಣ ಆರೋಪಿ ನನ್ನ ಮತ್ತು ತನ್ನ ಹೆಂಡತಿ ಮೇಲೆ ಅನಮಾನಪಡುತ್ತಿದ್ದ ಎಂದರೆ ಸರಿಯಲ್ಲ. ಆ ಕಾಲಕ್ಕೆ ಹಿರಿಯರೆಲ್ಲರೂ ಆರೋಪಿಗೆ ಬುದ್ದಿ ಹೇಳಿದ್ದರೂ ಸಹ ಆರೋಪಿ ತನ್ನ ಹೆಂಡತಿ ಮೇಲೆ ಅನುಮಾನ ಪಟ್ಟು ನನ್ನ ತಮ್ಮನನ್ನು ಇಟ್ಟುಕೊಂಡಿದ್ದಿಯಾ ಎಂದು ಕಿರುಕುಳ ನೀಡುತ್ತಿದ್ದ ಎಂದರೆ ಸರಿಯಲ್ಲ. ದಿನಾಂಕ 24.7.2019 ರಂದು ರಾತ್ರಿ 9.30 ಕ್ಕೆ ನಾನು ನನ್ನ ಅತ್ತಿಗೆ ಮತ್ತು ಮಕ್ಕಳನ್ನು ನೋಡಿಕೊಂಡು ಬರಲು ಮನೆ ಬಳಿ ಹೋದಾಗ ಆರೋಪಿ ತನ್ನ ಹೆಂಡತಿ ಜೊತೆ ಗಲಾಟೆ ಮಾಡುತ್ತಿದ್ದು ನಾನು ಗಲಾಟೆ ಮಾಡಬೇಡ ಎಂದು ಬುದ್ದಿ ಹೇಳಿ ಹೋಗಿದ್ದೆ

ಎಂದರೆ ಸರಿಯಲ್ಲ. ನಂತರ ದಿನಾಂಕ 25.7.2019 ರಂದು ಆರೋಪಿ ತನ್ನ ಹೆಂಡತಿಯ ಮೇಲಿನ ಅನುಮಾನದಿಂದ ಅವಳನ್ನು ಕೊಲೆ ಮಾಡಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ "ದಿನಾಂಕ 25.7.2019 ರಂದು ನನ್ನ ಅಣ್ಣನಾದ ನದಿಂಪಾಷನು -------------------------------- ತಮ್ಮ ಮುಂದೆ ಹೇಳಿಕೆ ನೀಡಿರುತ್ತೇನೆ" ಎಂದು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿಪಿ22 ಎಂದು ಗುರುತಿಸಿದೆ. ಈಗ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಹೆಸರು ಸಮ್ಮು ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ ಇಲ್ಲ**

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ.,

2 ನೇ ಅಪರ ಜಿಲ್ಲಾ ಮತ್ತು ಸತ್ತ ನ್ಯಾಯಾಧೀಶರು
ಮೈಸೂರು